anybody before the question hour. Let us finish the question hour. ನಿಮಗೆ ಒಬ್ಬರಿಗೆ ಅಲೋ ಮಾಡಿದರೆ ಎಲ್ಲರಿಗೂ ಅಲೋ ಮಾಡಬೇಕು. ಮೊದಲು ಪ್ರಶ್ನೋತ್ತರ ಮುಗಿಸೋಣ. ಪ್ರಶ್ನೋತ್ತರ ನಮಗೆ ಮುಖ್ಯ. ಮಾನ್ಯ ಸಭಾಪತಿಯವರು ತಮ್ಮ ಪ್ರಶ್ನೆ ಕೇಳಿ.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯಾದ್ಯಂತ ಜಿಲ್ಲಾ ಪಂಚಾಯತ್‌ಗಳಲ್ಲಿ ಇಂಜಿನಿಯರ್‌ಗಳ ಕೊರತೆ.

16(439)

ಶ್ರೀ ಸಭಾಪತಿ ಯು.ಆರ್.(ಉಡುಪಿ): ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯಾದ್ಯಂತ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಖಾಲಿ ಇರುವ ಜೂನಿಯರ್ ಇಂಜಿನಿಯರ್‌ಗಳ ಹುದ್ದೆಯೆಷ್ಟು? ಜಿಲ್ಲಾವಾರು ವಿವರ ನೀಡುವುದು.

2) ಜೂನಿಯರ್ ಇಂಜಿನಿಯರ್‌ಗಳ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಈವರೆಗೆ ಇದುವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

1) 173. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

2) ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆಯ ಮೇಲೆ ಕಿರಿಯ ಇಂಜಿನಿಯರ್‌ಗಳ ಸೇವೆಯನ್ನು ಪಡೆದು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

STATEMENT SHOWING THE DISTRICT WISE VACANCY POSITION OF JUNIOR ENGINEERS, ZP.ENGINEERING DIVISIONS IN KARNATAKA.

Sl. No.	Name of the ZP Engineering Division	Sanctioned Strength	Working Strength	Vacant Posts
1	Bidar	38	38	-
2	Gulbarga	66	61	05
3	Raichur	37	34	03
4	Koppal	28	27	01
5	Bellary	55	50	05
6	Chamarajnagar	26	20	06
7	Chitradurga	42	37	05
8	Davanagere	44	37	07
9	Shimoga	61	41	20
10	Tumkur	71	63	08
11	Kolar	57	42	15
12	Bangalore(U)	25	24	01
13	Bangalore(R)	44	42	02
14	Mandya	46	37	09
15	Hassan	46	40	06

16	Udupi	31	21	10
17	Madikeri	20	15	05
18	Dakshina Kannada	42	25	17
19	Mysore	57	44	13
20	Chikamagalore	51	38	13
21	Belgaum	60	55	05
22	Bijapur	42	42	-
23	Bagalkot	28	27	01
24	Dharwad	19	15	04
25	Gadag	20	17	03
26	Haveri	29	23	06
27	Uttar Kannada	57	54	03
	Total	1142	969	173

ಶ್ರೀ ಯು.ಆರ್.ಸಭಾಪತಿ: ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದು, ಉತ್ತರದಲ್ಲಿ ಜಿಲ್ಲಾವಾರು ವಿವರಗಳನ್ನೂ ಸಹ ನೀಡಿದ್ದಾರೆ. ರಾಜ್ಯದಲ್ಲಿ 1987ರಲ್ಲಿ ಜಿಲ್ಲಾ ಪರಿಷತ್ ಸ್ಥಾಪನೆಯಾದಂಥ ಸಂದರ್ಭದಲ್ಲಿ ರಾಜ್ಯಾದ್ಯಂತ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ಒಟ್ಟು 1, 142 ಕಿರಿಯ ಇಂಜಿನಿಯರ್ ಹುದ್ದೆಗಳು ಮಂಜೂರಾದವು. ಆದರೆ, ಆಗ ಮಂಡಲ್ ಪಂಚಾಯತ್ ವ್ಯಾಪ್ತಿಯಲ್ಲಿದ್ದು ನಂತರ ಗ್ರಾಮ ಪಂಚಾಯಿತಿಯಾಗಿ ಪರಿವರ್ತನೆಯಾದ ಬಳಿಕ ಅದರಲ್ಲೂ 173 ಖಾಲಿ ಹುದ್ದೆಗಳಿದ್ದು ಒಬ್ಬೊಬ್ಬ ಕಿರಿಯ ಇಂಜಿನಿಯರ್ ಅಧೀನದಲ್ಲಿ 8-9 ಗ್ರಾಮ ಪಂಚಾಯಿತಿಗಳಿದ್ದು ಸದರಿ ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡಲು ನಿಯೋಜಿಸಿದ್ದಾರೆ. ಈಗ ನಾನು ಕೇಳುತ್ತಿರುವುದೇನೆಂದರೆ, ಗ್ರಾಮೀಣಾಭಿವೃದ್ಧಿಯಲ್ಲಿ ಕಿರಿಯ ಇಂಜಿನಿಯರುಗಳ ಪಾತ್ರ ಬಹಳ ಮಹತ್ವದ್ದಾಗಿದ್ದು, ಒಬ್ಬೊಬ್ಬ ಕಿರಿಯ ಇಂಜಿನಿಯರ್ ಅಧೀನದಲ್ಲಿ ಇಷ್ಟು ಗ್ರಾಮ ಪಂಚಾಯಿತಿಗಳಿದ್ದರೆ ಅವರು ಹೇಗೆ ಕೆಲಸ ಮಾಡುತ್ತಾರೆ? ಅಭಿವೃದ್ಧಿ ಕಾರ್ಯಗಳು ಹೇಗಾಗುತ್ತವೆ? ಆದುದರಿಂದ ಖಾಲಿ ಇರುವ 173 ಹುದ್ದೆಗಳನ್ನು ಭರ್ತಿ ಮಾಡುವುದರೊಂದಿಗೆ ಮತ್ತಷ್ಟು ಹುದ್ದೆಗಳನ್ನು ತುಂಬಲು ತಾವು ಮಂಜೂರಾತಿ ನೀಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿ ಕೊಳ್ಳುತ್ತಿದ್ದೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ರಾಜ್ಯಾದ್ಯಂತ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಕಿರಿಯ ಇಂಜಿನಿಯರುಗಳ ಪರಿಸ್ಥಿತಿ ಏನಿದೆ ಎಂಬ ಬಗ್ಗೆ ಉತ್ತರದಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಮಂಜೂರಾದ ಹುದ್ದೆಗಳು 1, 142 ಇದ್ದು, ಈ ಪೈಕಿ 969 ಹುದ್ದೆಗಳನ್ನು ತುಂಬಲಾಗಿದ್ದು 173 ಹುದ್ದೆಗಳು ಖಾಲಿ ಇರುತ್ತವೆ. ಇದರ ಸರಾಸರಿ ಗಮನಿಸಿದಾಗ ಒಂದೊಂದು ತಾಲ್ಲೂಕಿಗೂ ಮಂಜೂರಾದ ಹುದ್ದೆ 6.5 ಬರುತ್ತದೆ. ಆದರೆ, ಈಗ ಒಂದೊಂದು ತಾಲ್ಲೂಕಿಗೆ ನೇಮಕಾತಿಯಾಗಿರುವುದು ಸರಾಸರಿ 5.5 ಬರುತ್ತದೆ. ಅಂದರೆ ಒಂದು ತಾಲ್ಲೂಕಿಗೆ ಮಂಜೂರಾದ ಹುದ್ದೆಗೆ ಹೋಲಿಸಿದರೆ ಒಂದೇ ಒಂದು ಕಡಿಮೆಯಿದೆ. ಈಗ ಮೂರು ತಾಲ್ಲೂಕುಗಳಿರುವ ಉಡುಪಿ ಜಿಲ್ಲೆ ಕುರಿತು ಹೇಳುವುದಾದರೆ, ಸದರಿ ಜಿಲ್ಲೆಯಲ್ಲಿ 21 ಕಿರಿಯ ಇಂಜಿನಿಯರುಗಳಿದ್ದಾರೆ. ಅಂದರೆ, ಒಂದು ತಾಲ್ಲೂಕಿನಲ್ಲಿ ಸರಾಸರಿ 7 ಕಿರಿಯ ಇಂಜಿನಿಯರುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಆದುದರಿಂದ, ಸರ್ಕಾರ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಸ್ವಲ್ಪ ತಡ ಮಾಡಿದ್ದರೂ, ಅಭಿವೃದ್ಧಿ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ಅಂತಹ ಕಷ್ಟದ ಪರಿಸ್ಥಿತಿಯೇನೂ ಕಂಡು ಬರುತ್ತಿಲ್ಲ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಸಚಿವರ ಅಭಿಪ್ರಾಯಕ್ಕೆ ನಾನು ಒಂದು ಮಾತನ್ನು ಹೇಳಬಯಸುವುದೇನೆಂದರೆ, ಒಂದು ತಾಲ್ಲೂಕಿಗೆ ಸರಾಸರಿ ಏಳು ಕಿರಿಯ

ಇಂಜಿನಿಯರುಗಳಿದ್ದಾರೆಂದು ಹೇಳಿದರು. ನನ್ನ ಉಡುಪಿ ತಾಲ್ಲೂಕಿನಲ್ಲಿಯೇ ಸುಮಾರು 67 ಗ್ರಾಮ ಪಂಚಾಯಿತಿಗಳಿದ್ದು, ಈ ಗ್ರಾಮ ಪಂಚಾಯಿತಿಗಳಲ್ಲಿ ಇರುವ ಏಳು ಕಿರಿಯ ಇಂಜಿನಿಯರುಗಳು ಯಾವ ರೀತಿಯಲ್ಲಿ ಕೆಲಸ ಮಾಡಬಹುದೆಂಬುದನ್ನು ತಾವು ಹೇಳಬೇಕು.

ಶ್ರೀ ಎಂ.ವೈ.ಘೋರ್ಪಡೆ: ಈಗ ನಮ್ಮ ಮುಂದಿರುವ ಮಾಹಿತಿ ಪ್ರಕಾರ ತಮ್ಮ ಜಿಲ್ಲೆಯಾಗಿರುವ ಉಡುಪಿಯೊಂದರಲ್ಲೇ ಮೂರು ತಾಲ್ಲೂಕುಗಳಿದ್ದು, ಇಲ್ಲಿ ಒಟ್ಟು 21 ಕಿರಿಯ ಇಂಜಿಯರುಗಳು ಇವೊತ್ತು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂದರೆ, ಒಂದು ತಾಲ್ಲೂಕಿಗೆ ಏಳು ಕಿರಿಯ ಇಂಜಿನಿಯರುಗಳು ಇದ್ದಾರೆಂದಾಯಿತು. ಈಗ ರಾಜ್ಯಾದ್ಯಂತ ಒಂದೊಂದು ತಾಲ್ಲೂಕಿಗೆ ಸರಾಸರಿ ಐದು ಕಿರಿಯ ಇಂಜಿನಿಯರುಗಳಿದ್ದು, ತಮ್ಮ ಜಿಲ್ಲೆಯ ತಾಲ್ಲೂಕೊಂದರಲ್ಲಿಯೇ ಏಳು ಕಿರಿಯ ಇಂಜಿನಿಯರುಗಳು ಕಾರ್ಯ ನಿರ್ವಹಿಸುತ್ತಿರುವುದರಿಂದ, ಕಿರಿಯ ಇಂಜಿನಿಯರುಗಳ ಹುದ್ದೆಯ ಅಭಾವ ಅಷ್ಟೊಂದು ಇದೆಯೆಂದು ನನಗನ್ನಿಸುವುದಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ರಾಜ್ಯದಲ್ಲಿ ಒಂದು ತಾಲ್ಲೂಕಿಗೆ ಒಂದು ಅಸೆಂಬ್ಲಿ ಸೆಗ್‌ಮೆಂಟ್ ಇದ್ದರೆ, ಉಡುಪಿ ತಾಲ್ಲೂಕು ಒಂದರಲ್ಲಿಯೇ ಮೂರು ಪ್ಲಸ್ ಕುಂದಾಪುರ ಅಸೆಂಬ್ಲಿ ಸೆಗ್‌ಮೆಂಟ್ ಸಹ ಇದೆ. ಇಲ್ಲಿ ಏಳು ಗ್ರಾಮಗಳು ಬರುತ್ತವೆ. ಆದುದರಿಂದ ನಮ್ಮ ಭಾಗದಲ್ಲಿರುವ ತಾಲ್ಲೂಕಿಗೂ ಪಕ್ಕದ ಭಾಗದಲ್ಲಿರುವ ತಾಲ್ಲೂಕಿಗೂ ಹೊಂದಾಣಿಕೆ ಮಾಡಬಾರದು. ನಮ್ಮ ಭಾಗದಲ್ಲಿ ಒಂದು ತಾಲ್ಲೂಕಿಗೆ ಏಳು ಕಿರಿಯ ಇಂಜಿನಿಯರುಗಳು ಸಾಕಾಗುವುದಿಲ್ಲ.

ಶ್ರೀ ಯು.ಆರ್.ಸಭಾಪತಿ: ಈ ಕುರಿತು ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ವಿಭಾಗದಲ್ಲಿರುವ ಕಿರಿಯ ಇಂಜಿನಿಯರುಗಳೇನಿದ್ದಾರೆ, ಇವರೆಲ್ಲರೂ ಲೋಕೋಪಯೋಗಿ ಇಲಾಖೆ ಮತ್ತು ಬೇರೆ ಬೇರೆ ಇಲಾಖೆಗಳಿಂದ ಎರವಲು ಸೇವೆ ಆಧಾರದ ಮೇಲೆ ಬಂದಿದ್ದು, ಸದರಿ ಹುದ್ದೆಗಳ ಕೊರತೆ ಲೋಕೋಪಯೋಗಿ ಇಲಾಖೆ, ಮೈನರ್ ಇರಿಗೇಷನ್ ಇಲಾಖೆ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲೂ ಸಹ ಇದ್ದು, ಇದು ಒಂದಕ್ಕೊಂದು ಲಿಂಕ್ ಆಗಿರುವುದರಿಂದ, ಕಿರಿಯ ಇಂಜಿನಿಯರುಗಳ ಹುದ್ದೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ಭರ್ತಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ನೇರ ನೇಮಕಾತಿಯಾಗಲು ಸ್ವಲ್ಪ ತಡವಾಗಿರುವುದು ಎಲ್ಲರಿಗೂ ಗೊತ್ತಿದೆ. ಯಾವ ಕಾರಣಕ್ಕಾಗಿ ನೇರ ನೇಮಕಾತಿ ಪೂರ್ತಿಯಾಗಿ ಮಾಡುವುದಕ್ಕಾಗಿರುವುದಿಲ್ಲವೆಂಬುದು ತಿಳಿದಿದೆ. ಖಾಲಿ ಇರುವ 173 ಕಿರಿಯ

ಇಂಜಿನಿಯರುಗಳ ಹುದ್ದೆಗಳನ್ನು (ಲೋಕೋಪಯೋಗಿ ಇಲಾಖೆಯಿಂದ) ಭರ್ತಿ ಮಾಡುವ ಪ್ರಸ್ತಾವನೆ ಈಗಾಗಲೇ ಹಣಕಾಸು ಇಲಾಖೆಗೆ ಹೋಗಿದ್ದು, ಆ ಕುರಿತಾದ ಕಡತ ಅಲ್ಲಿಯೇ ಇದೆ. ಅಲ್ಲದೆ, ರಾಜ್ಯದ ಒಟ್ಟಾರೆ ಪರಿಸ್ಥಿತಿ, ಆಡಳಿತ ಸುಧಾರಣಾ ಆಯೋಗದ ವರದಿ, ಆರ್ಥಿಕ ಮಿತವ್ಯಯ ಆದೇಶ ಮುಂತಾದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಖಾಲಿಯಿರುವ ಹುದ್ದೆಗಳನ್ನು ತುಂಬುವುದಕ್ಕೆ ನಾವು ಸರ್ವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ವಸಂತ ವಿ.ಸಾಲಿಯಾನ: ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳಿದ್ದು ಒಟ್ಟು 62 ಗ್ರಾಮ ಪಂಚಾಯಿತಿಗಳಿವೆ. ನನ್ನ ವಿಧಾನಸಭಾ ಕ್ಷೇತ್ರದಲ್ಲಿ 22 ಗ್ರಾಮ ಪಂಚಾಯಿತಿಗಳಿದ್ದು ಇಬ್ಬರು ಕಿರಿಯ ಇಂಜಿನಿಯರುಗಳಿದ್ದಾರೆ. ಈಗ ಕುಡಿಯುವ ನೀರಿನ ಯೋಜನೆ ಇರಬಹುದು, ಕಿರು ನೀರಾವರಿ ಸರಬರಾಜು ಯೋಜನೆ ಇರಬಹುದು, ಇನ್ನಿತರ ಯಾವುದೇ ಕಾಮಗಾರಿಯಾಗಿರಬಹುದು, ಕಿರಿಯ ಇಂಜಿನಿಯರುಗಳ ಕೊರತೆಯಿಂದಾಗಿ ಇವೊತ್ತು ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸ-ಕಾರ್ಯಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆನ್ನುವ ರೀತಿಯಲ್ಲಿ ಈಗಾಗಲೇ ಅನೇಕ ಸಲ ನಮ್ಮ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿರುತ್ತದೆ. ಆದುದರಿಂದ, ನಾನು ಮಾನ್ಯ ಮಂತ್ರಿಗಳಲ್ಲಿ ಬೇಡಿಕೊಳ್ಳುವುದಿಷ್ಟೆ, ಉಡುಪಿ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಅನುಷ್ಠಾನಗೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಕಿರಿಯ ಇಂಜಿನಿಯರುಗಳನ್ನು ನೇಮಿಸಿದರೆ ಅದು ಸಾಧ್ಯವಾಗುತ್ತದೆ. ನಾವು ಮಾರ್ಚ್ ತಿಂಗಳ ಅಂತ್ಯಕ್ಕೆ ಬರುತ್ತಿದ್ದರೂ ಅಂದಾಜು ತಯಾರಾಗದೆ ಕೆಲವೊಂದು ಕಾಮಗಾರಿಗಳು ಅನುಷ್ಠಾನವಾಗದ ರೀತಿಯಲ್ಲಿ ಇರುವುದರಿಂದ ಹೆಚ್ಚಿನ ಕಿರಿಯ ಇಂಜಿನಿಯರುಗಳನ್ನು ತಾವು ನೇಮಕ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಗೋಪಾಲ ಭಂಡಾರಿ: ಈಗಾಗಲೇ ಮಾನ್ಯ ಸದಸ್ಯರು ತಿಳಿಸಿರುವಂತೆ ಉಡುಪಿ ಜಿಲ್ಲೆಯಲ್ಲಿ ಒಟ್ಟು 21 ಕಿರಿಯ ಇಂಜಿನಿಯರುಗಳ ಹುದ್ದೆ ಇದ್ದು, ತಾಲ್ಲೂಕು ಪಂಚಾಯಿತಿಗಳಲ್ಲಿರುವ ಕಿರಿಯ ಇಂಜಿನಿಯರುಗಳ ಹುದ್ದೆಗಳೆಲ್ಲವೂ ತೆರವಾಗಿದ್ದು ಇಬ್ಬರು-ಮೂವರು ಕಿರಿಯ ಇಂಜಿನಿಯರುಗಳನ್ನು ಹೊರತುಪಡಿಸಿದರೆ ಉಳಿದವರೆಲ್ಲರನ್ನೂ ಜಿಲ್ಲಾ ಪಂಚಾಯಿತಿಗೆ ನಿಯೋಜಿಸಿದ್ದಾರೆ. ಇದರಿಂದಾಗಿ ಅಲ್ಲಿಯೂ ಕೆಲಸವಿಲ್ಲ, ಇಲ್ಲಿಯೂ ಕೆಲಸವಿಲ್ಲದಂಥ ಪರಿಸ್ಥಿತಿಯುಂಟಾಗಿದೆ. ಜಿಲ್ಲೆಯ ಮೂರು ತಾಲ್ಲೂಕು ಪಂಚಾಯಿತಿಗಳಲ್ಲಿ ಕೂಡ ಕಿರಿಯ ಇಂಜಿನಿಯರುಗಳ ಹುದ್ದೆಗಳು ಖಾಲಿ ಇರುವುದರಿಂದ ದಯಮಾಡಿ ಎರಡನ್ನೂ ಸೇರಿಸಿ ಸದರಿ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ನಿರ್ಧಾರ ಕೈಗೊಳ್ಳುವುದು ಒಳ್ಳೆಯದೆಂದು ನನ್ನ ಮನವಿ.

ಡಾ: ಭಾರತಿಶಂಕರ್: ಸರ್ಕಾರ 1986-87ನೇ ಇಸವಿಯಿಂದಲೂ ಕಿರಿಯ ಇಂಜಿಯರುಗಳನ್ನು ನೇಮಕಾತಿ ಮಾಡಿಕೊಂಡಿಲ್ಲದಿರುವುದರಿಂದ ಇವರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರ ಅನುಮತಿ ನೀಡಿದರೆ ಯುವಕರಿಗೆ ಉದ್ಯೋಗ ದೊರಕಿ ಅನುಕೂಲವಾಗುತ್ತದಲ್ಲದೆ ಪಂಚಾಯಿತಿಗಳ ಕೆಲಸಗಳೂ ಸರಾಗವಾಗಿ ನಡೆಯುತ್ತದೆಂದು ಹೇಳುತ್ತಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಸಚಿವರು ಹೇಳಿರುವುದಕ್ಕೆ ನಾನು ತಿಳಿಸುವುದೇನೆಂದರೆ, ಒಂದೆಡೆ ಏಳು ಮತ್ತೊಂದೆಡೆ ಐದು ಕಿರಿಯ ಇಂಜಿನಿಯರುಗಳ ಹುದ್ದೆಗಳು ಖಾಲಿಯಿದೆಯೆಂದು ಏನು ಹೇಳುತ್ತಿದ್ದಾರೆ, ಗದಗ್ ಜಿಲ್ಲೆಯ ಮುಂಡರಗಿ ತಾಲ್ಲೂಕು ಒಂದರಲ್ಲಿಯೇ ಮೂರು ಕಿರಿಯ ಇಂಜಿನಿಯರುಗಳ ಹುದ್ದೆಗಳು ಖಾಲಿ ಇದೆ. ಖಾಲಿ ಹುದ್ದೆಗಳನ್ನು ತುಂಬಲು ತಕ್ಷಣ ಕ್ರಮ ಕೈಗೊಂಡು ಆಗುತ್ತಿರುವ ತೊಂದರೆಗಳನ್ನು ಸರಿಪಡಿಸುತ್ತೀರಾ ಹೇಗೆ? ಸರಿಪಡಿಸದಿದ್ದರೆ ಏನೂ ಕೆಲಸವಾಗುವುದಿಲ್ಲ. ಲೋಕೋಪಯೋಗಿ ಇಲಾಖೆಯಿಂದಲೇ ಕಿರಿಯ ಇಂಜಿನಿಯರುಗಳನ್ನು ತೆಗೆದುಕೊಂಡಿರುವುದರಿಂದ ಇದಕ್ಕೆ ಬೇರೆ ಇಲಾಖೆಯನ್ನು ಮಾಡುತ್ತೀರಾ? ಹೇಗೆ?

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನನ್ನ ಕ್ಷೇತ್ರದಲ್ಲಿರುವ ಎಲ್ಲಾ ಕಿರಿಯ ಇಂಜಿನಿಯರ್ ಹುದ್ದೆಗಳನ್ನು ಹಾಗೆಯೇ ಖಾಲಿ ಇಟ್ಟು ಆ ಕಿರಿಯ ಇಂಜಿನಿಯರ್ ಎಲ್ಲರನ್ನೂ ಬೇರೆಡೆಗೆ ವರ್ಗಾವಣೆ ಮಾಡಿ. ಏಕೆಂದರೆ, ಆ ಮಹಾಶಯರು ಇಲ್ಲದಿದ್ದರೆ ನನಗೆ ನನ್ನ ಕ್ಷೇತ್ರದ ಕೆಲಸ-ಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ!

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ವಿಭಾಗದಲ್ಲಿ ಕಿರಿಯ ಇಂಜಿನಿಯರುಗಳ ಹುದ್ದೆಗಳು ಖಾಲಿ ಇರುವುದರಿಂದ ಬಹಳಷ್ಟು ಅಭಿವೃದ್ಧಿ ಕೆಲಸ-ಕಾರ್ಯಗಳು ಸ್ಥಗಿತಗೊಳ್ಳುತ್ತಿದೆ. ತಾಲ್ಲೂಕು ಪಂಚಾಯಿತಿಯಲ್ಲೂ 2-3 ಕಿರಿಯ ಇಂಜಿನಿಯರ್‌ಗಳಿರಬೇಕಿದ್ದರೂ ಅಲ್ಲಿಯೂ ಖಾಲಿ ಇವೆ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಇಂಜಿನಿಯರುಗಳು ಬಹಳಷ್ಟು ಸಂಖ್ಯೆಯಲ್ಲಿರುವುದರಿಂದ ಎರವಲು ಸೇವೆ ಆಧಾರದ ಮೇಲೆ ತಾಲ್ಲೂಕು ಪಂಚಾಯಿತಿಗಳಿಗೆ ಬಂದು ಕೆಲಸ ಮಾಡಲು ಯಾರೂ ತಯಾರಿಲ್ಲ. ಆದುದರಿಂದ, ಎಲ್ಲಾ ತಾಲ್ಲೂಕು ಪಂಚಾಯಿತಿಗಳಲ್ಲೂ ಕಿರಿಯ ಇಂಜಿನಿಯರುಗಳನ್ನು ನೇಮಕ ಮಾಡುವುದಕ್ಕೆ ಕೂಡಲೇ ತಾವು ವ್ಯವಸ್ಥೆ ಮಾಡಬೇಕು.

ಶ್ರೀ ಕೆ.ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 42

ಕಿರಿಯ ಇಂಜಿನಿಯರ್‌ಗಳಿರಬೇಕಾಗಿದ್ದು, ಕೇವಲ 25 ಇದ್ದಾರೆ, 17 ಖಾಲಿ ಹುದ್ದೆಗಳಿವೆ. ಈ ಜಿಲ್ಲೆಯಲ್ಲಿ ಒಂಬತ್ತು ವಿಧಾನಸಭಾ ಕ್ಷೇತ್ರಗಳಿದ್ದು, ಐದು ತಾಲ್ಲೂಕುಗಳು ಬರುತ್ತದೆ. ಪ್ರತಿಯೊಂದು ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ಕಿರಿಯ ಇಂಜಿನಿಯರುಗಳ ಹುದ್ದೆಗಳ ಕೊರತೆಯಿರುವುದರಿಂದ ನಾವು ಅಭಿವೃದ್ಧಿ ಕೆಲಸಕಾರ್ಯಗಳ ಕುರಿತು ವಿಚಾರಿಸಿದರೆ ಹುದ್ದೆಗಳ ಕೊರತೆ ಇರುವುದರಿಂದ ಟೆಂಡರ್‌ಗಳನ್ನು ಆದಷ್ಟು ಬೇಗ ಕರೆಯಲು ಮತ್ತು ಎಸ್ಟಿಮೇಟನ್ನು ಸಹ ಮಾಡಲು ಸಾಧ್ಯವಾಗುವುದಿಲ್ಲವೆಂದು ಇರುವ ಕಿರಿಯ ಇಂಜಿನಿಯರುಗಳು ಹೇಳುತ್ತಿದ್ದಾರೆ. ಆದುದರಿಂದ, ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಸರ್ಕಾರ ಗುತ್ತಿಗೆ ಆಧಾರದ ಮೇಲಾದರೂ ಕಿರಿಯ ಇಂಜಿನಿಯರುಗಳನ್ನು ಆದಷ್ಟು ಬೇಗ ನೇಮಕ ಮಾಡಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಗುಂಡಪ್ಪ ವಕೀಲ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಮೂರು ಮಂಜೂರಾದ ಹುದ್ದೆಗಳು ಇವೆ, ಆದರೆ ಅಲ್ಲಿ 18 ಜನ ಅಧಿಕಾರಿಗಳು ಇದ್ದಾರೆ. ಆ 18 ಜನ ಇಂಜಿನಿಯರ್‌ಗಳು ಬರತಕ್ಕ ಬಜೆಟ್‌ನೆಲ್ಲ ನುಂಗಿಬಿಟ್ಟಿದ್ದಾರೆ. ಇದು ಈ ವರ್ಷದ್ದಲ್ಲ. ಕಳೆದ ಹನ್ನೆರಡು ವರ್ಷಗಳಿಂದ ಹೀಗೆಯೇ ನಡೆದುಕೊಂಡು ಬರುತ್ತಿದೆ. ನಾನು ಕಳೆದ ಒಂದು ವರ್ಷದಿಂದ ಇವರುಗಳನ್ನು ಖಾಲಿ ಇರುವ ಬೇರೆ ಕಡೆಗಳಿಗೆ ಕಳಿಸಿಬಿಡಿ ಎಂದು ಹಲವಾರು ಸಲ ಪ್ರಾರ್ಥನೆ ಮಾಡಿದ್ದೇನೆ. ಆದರೂ ಅವರುಗಳು ಅಲ್ಲೇ ಇದ್ದಾರೆ. ತಾವು ನನ್ನ ಫಿರ್ಯಾದು ಕೇಳಿ ಪುಣ್ಯವನ್ನು ಕಟ್ಟಿಕೊಳ್ಳಿ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ನೇರ ನೇಮಕಾತಿ ಮಾಡಬೇಕಾಗುತ್ತದೆ. ನಾವು ನೇರ ನೇಮಕಾತಿಯನ್ನು ಮಾಡಲು ಸಾಧ್ಯವಾಗಿಲ್ಲ. ಇದು ಪಿ.ಡಬ್ಲ್ಯೂ.ಡಿ. ಮತ್ತು ಆರ್.ಡಿ.ಪಿ.ಆರ್. ಎರಡೂ ಇಲಾಖೆಗಳಿಗೆ ಸೇರಿರುವ ವಿಚಾರವಾಗಿದೆ. ಪಿ.ಡಬ್ಲ್ಯೂ.ಡಿ.ಯವರು ಪೋಸ್ಟ್‌ಗಳ ಸಾಂಕ್ಷನ್‌ಗೆ ಹಣಕಾಸು ಇಲಾಖೆಗೆ ಒಂದು ಪ್ರಪೋಸಲ್‌ನ್ನು ಕಳಿಸಿದ್ದಾರೆ. ಹಣಕಾಸು ಇಲಾಖೆಯಿಂದ ಇನ್ನೂ ಸ್ಯಾಂಕ್ಷನ್ ಆಗಿ ಬಂದಿಲ್ಲ. ನಾವು ಜಿಲ್ಲೆಗಳಲ್ಲಿರುವ ತಾಲ್ಲೂಕುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇದೆ ಎಂಬ ಬಗ್ಗೆ ಅಂಕಿಅಂಶವನ್ನು ಕೊಟ್ಟಿದ್ದೇವೆ. ಒಂದು ತಾಲ್ಲೂಕಿನಲ್ಲಿ ಹೆಚ್ಚಾಗಿ ಇಂಜಿನಿಯರ್‌ಗಳು ಇದ್ದು ಮತ್ತೊಂದು ಕಡೆ ಕಡಿಮೆ ಇದ್ದರೆ ಆ ತಾರತಮ್ಯವನ್ನು ಸರಿಪಡಿಸಲು ಪ್ರಯತ್ನ ಪಡುತ್ತೇವೆ. We will review this position and take some corrective steps even before direct recruitment takes place. After direct recruitment, this problem will not be there. ಅದಕ್ಕೂ ಮೊದಲೇ ಏನು ತೊಂದರೆಯಾಗುತ್ತಿದೆ ಇದರ

ಬಗ್ಗೆನಾವು ರಿವ್ಯೂ ಮಾಡುತ್ತೇವೆ and take such corrective steps as far as possible in consultation with the PWD.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಗುಂಡಪ್ಪ ವಕೀಲರ ಕ್ಷೇತ್ರದಲ್ಲಿ 3 ಪೋಸ್ಟ್‌ಗೆ 18 ಮಂದಿ ಇದ್ದಾರೆ, ಆದರೆ ನಮ್ಮಲ್ಲಿ ಒಬ್ಬರೂ ಇಲ್ಲ.

ಶ್ರೀ ಎಂ.ವೈ.ಘೋರ್ಪಡೆ: ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನಲ್ಲಿ ಬಡ್ಡಿ ಹಗರಣ.

17(220)

ಶ್ರೀ ನಾಯಕ್ ಜೆ.ಡಿ.(ಭಟ್ಕಳ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ಜಿಲ್ಲಾ ಪಂಚಾಯತ್‌ನ ಅವಧಿಯಲ್ಲಿ ಆದ ಬಡ್ಡಿ ಹಗರಣ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಗರಣದಲ್ಲಿ ಆದ ಒಟ್ಟು ಮೊತ್ತವೆಷ್ಟು;

ಇ) ಹಗರಣದಲ್ಲಿ ಶಾಮೀಲಾದ ಅಧಿಕಾರಿಗಳ ಮೇಲೆ ಯಾವ ರೀತಿ ಕಾನೂನು ಕ್ರಮ ಕೈಗೊಳ್ಳಲಾಗಿದೆ? (ಅಧಿಕಾರಿಗಳ ವಿವರ ಹಾಗೂ ತೆಗೆದುಕೊಂಡ ಕ್ರಮವನ್ನು ಒದಗಿಸುವುದು);

ಈ) ಹಗರಣದಲ್ಲಿ ಶಾಮೀಲಾಗಿದ್ದ ಎಲ್ಲಾ ಅಧಿಕಾರಿಗಳು ಈಗಲೂ ಸರ್ಕಾರದ ಸೇವೆಯಲ್ಲಿ ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಬಂದಿದೆ.

ಆ) ಮಹಾಲೇಖಪಾಲರು ಈ ಲೆಕ್ಕಪತ್ರದ ಬಗ್ಗೆ ವಿಶೇಷ ತನಿಖೆಯನ್ನು ನಡೆಸುತ್ತಿದ್ದು ಅವರಿಂದ ಅಂತಿಮ ವರದಿಯು ಬಂದ ನಂತರ ಖಚಿತವಾದ ಮೊತ್ತವೆಷ್ಟು ಎಂಬುದು ತಿಳಿದುಬರುತ್ತದೆ.